**(ಇಂದು ದಿನಾಂಕ 21-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

ಸಾಕ್ಷಿಗೆ ಕನ್ನಡ ಬರದೆ ಇರುವ ಕಾರಣ ಮರಾಠಿಯಿಂದ ಕನ್ನಡಕ್ಕೆ ಅನುವಾದಕರಾಗಿ ಶ್ರೀಮತಿ. ಪಿ ಎಸ್ ಜಾದವ ವಕೀಲರನ್ನು ನೇಮಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ**

ಪಿರ್ಯಾದಿದಾರ ನನಗೆ ಟ್ರ್ಯಾಕ್ಟರ ಮಾರಾಟ ಮಾಡಿದ ಬಗ್ಗೆ ಇನ್ ವೈಸ ನೀಡಿರುವುದಿಲ್ಲ. ನಾನು ಪಿರ್ಯಾದಿದಾರ ಕಂಪನಿಯಿಂದ ಟ್ರ್ಯಾಕ್ಟರಗಳನ್ನು ಖರೀದಿ ಮಾಡಿದ ನಂತರ ಅವರಿಗೆ ಹಣ ಸಂದಾಯ ಮಾಡುತ್ತಿದ್ದೆನು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಪಿರ್ಯಾದಿದಾರರಿಂದ ಟ್ರ್ಯಾಕ್ಟರ ಖರೀದಿಸಿದ ನಂತರ ಪಿರ್ಯಾದಿದಾರ ಕರ್ನಾಟಕ ಬ್ಯಾಂಕ ಖಾತೆಗೆ ಹಣ ಸಂದಾಯ ಮಾಡುತ್ತಿದ್ದೆನು ಎಂದರೆ ಸರಿ. ಆರೋಪಿತ ಸಂಸ್ಥೆಯ ಹೆಸರಿನಲ್ಲಿ ಸ್ಟೇಟಬ್ಯಾಂಕ ಆಫ್ ಹೈದರಾಬಾದ ನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ಸದರಿ ಖಾತೆ ಸಂ.62346828258 ಎಂದರೆ ಸರಿ. ನಿ.ಪಿ.52 ನ್ನು ಸ್ಟೇಟ ಬ್ಯಾಂಕ ಆಫ್ ಹೈದರಾಬಾದ ನವರು ನೀಡಿರುತ್ತಾರೆ ಎಂದರೆ ಸರಿ. ನಿ.ಪಿ.52 ರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಪಿರ್ಯಾದರರು ನನಗೆ ಎಷ್ಟು ಟ್ರ್ಯಾಕ್ಟರಗಳನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪಿರ್ಯಾದಿ ಸಂಸ್ಥೆ ನನಗೆ ಟ್ರ್ಯಾಕ್ಟರಗಳನ್ನುಪೂರೈಕೆ ಮಾಡಿದ ನಂತರ ನಾನು ಎಲ್ಲಾ ಹಣ ನೀಡಿರುತ್ತೇನೆ. ನಾನು ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ನಗದು ರೂಪದಲ್ಲಿ ನೀಡಿರುತ್ತೇನೆ ಎನ್ನುತ್ತಾರೆ. ಪಿರ್ಯಾದಿ ಮತ್ತು ನಮ್ಮ ವ್ಯವಹಾರ ಖಾತೆಯಿಂದ ಖಾತೆ ನಡೆಯುತ್ತಿತ್ತು ಎಂದರೆ ಸರಿ. ಪಿರ್ಯಾದಿ ಸಂಸ್ಥೆ ನನ್ನೊಂದಿಗೆ ನಗದು ರೂಪದಲ್ಲಿ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿ ಸಂಸ್ಥಗೆ ನಗದು ರೂಪದಲ್ಲಿ ಹಣ ಸಂದಾಯ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿ ಸಂಸ್ಥೆ ನನಗೆ ಮಾರಾಟ ಮಾಡಿದ ಟ್ರ್ಯಾಕ್ಟರಗಳ ಒಟ್ಟು ಮೊತ್ತ ರೂ.7,62,33,687/- ಎಂದರೆ ಸರಿಯಲ್ಲ. ಪಿರ್ಯಾದಿ ಸಂಸ್ಥೆಗೆ ಸಂದಾಯ ಮಾಡಿದ ಹಣದ ವಿವರ ಮತ್ತು ದಾಖಲೆ ನನ್ನ ಬಳಿ ಇರುತ್ತದೆ. ನಾನು ಪಿರ್ಯಾದಿ ಸಂಸ್ಥೆಗೆ ನೀಡಿದ ನಗದು ರೂಪದ ಹಣಕ್ಕೆ ಪಿರ್ಯಾದಿ ಅವರು ಸ್ವಿಕೃತಿ ರಶೀದಿಯನ್ನು ಪಡೆದಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪಿರ್ಯಾದಿ ಸಂಸ್ಥೆ ಅವರು ರಶೀದಿ ನೀಡಿರುವುದಿಲ್ಲ

ಎನ್ನುತ್ತಾರೆ. ನಾನು ಹಣ ನೀಡಿದ ಬಗ್ಗೆ ರಶೀದಿ ಪಡೆದುಕೊಳ್ಳುವುದಿಲ್ಲ. ನಾನು ನಗದು ರೂಪದಲ್ಲಿ ಹಣ ನೀಡಿರುತ್ತೇನೆ ಅದಕ್ಕೆ ಪಿರ್ಯಾದಿ ಸಂಸ್ಥೆ ಅವರು ರಶೀದಿ ನೀಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿ ಸಂಸ್ಥೆ ಅವರಿಗೆ ನೀಡಿದ ಹಣದ ಬಗ್ಗೆ ಆದಾಯ ತೇರಿಗೆ ಇಲಾಖೆಗೆ ನೀಡಿರುತ್ತೇನೆ. ನಾನು 2014 ರಿಂದ 2017 ರ ಆದಾಯ ತೇರಿಗೆ ಪಾವತಿ ಮಾಡಿದ  ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲಾಗುವುದಿಲ್ಲ. ನಾನು ಪಿರ್ಯಾದಿ ಸಂಸ್ಥೆ ಮಾರಾಟ ಮಾಡಿದ ಟ್ರ್ಯಾಕ್ಟರಗಳ ಒಟ್ಟು ಮೊತ್ತದ ಪೈಕಿ ರೂ.7,01,73,030/- ಮಾತ್ರ ಸಂದಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರ ನ ಪ್ರಕಾರ ರೂ.67,60,657/- ಮೂಲ ಹಣ ಬಾಕಿ ಇರುತ್ತದೆ ಎಂದರೆ ಸರಿಯಲ್ಲ.  ನಿ.ಪಿ.48 ರ ಪ್ರಕಾರ ಪಿರ್ಯಾದಿದಾರರು ನನಗೆ ಟ್ರ್ಯಾಕ್ಟರ ಮಾರಾಟ ಮಾಡಿದ 30 ದಿನಗಳ ಒಳಗ ಹಣ ಮರು ಪಾವತಿ ಮಾಡಬೇಕು ಒಂದು ವೇಳೆ ಮರು ಪಾವತಿ ಮಾಡಲು ಆಗದಿದ್ದರೆ 30 ದಿನಗಳ ಅವಧಿಗೆ ಶೇ.1.5 ರಷ್ಟು ಪ್ರತಿ ತಿಂಗಳಿಗೆ ಬಡ್ಡಿ ವಿದಿಸುವ ಶರತ್ತು ಇತ್ತು ಎಂದರೆ ಸರಿಯಲ್ಲ. ನಿ.ಪಿ.48 ರಲ್ಲಿ ಆ ರೀತಿ ಶರತ್ತು ಇದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.48 ರ ಕ್ಕಿಂತ ಮೊದಲು ನಿ.ಪಿ.46 ದಾಖಲೆ ಆಗಿತ್ತು ಎಂದರೆ ಸಾಕ್ಷಿಯು ಅಂತಹ ಕರಾರು ಆಗಿರುವುದಿಲ್ಲ ಎನ್ನುತ್ತಾರೆ. ನಿ.ಪಿ.46 ಮತ್ತು 48 ಚಾಪಾ  ಖಾಗದುಗಳನ್ನು ನಾನೇ ಖರೀದಿಸಿರುತ್ತೇನೆ ಎಂದರೆ ಸರಿ. ನಾನು ಖಾಲಿ ದಾಖಲೆಗಳಿಗೆ ಸಹಿ ಮಾಡಿಕೊಡುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದುಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ  ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.